ಮುಗಿಸಿ ಮನೆಗೆ ಹೋದರೆ ಸಾಕಾಗಿದೆ...' ಅಂತ ಇಬ್ಬರೂ ತಮಗಷ್ಟೇ ಕೇಳಿಸುವಂತೆ ಹೇಳಿಕೊಂಡು ತಮ್ಮ ದುರದೃಷ್ಟವನ್ನು ಹಳಿದುಕೊಂಡರು.

ಸಂಜೆ ನಾಲ್ಕರ ಹೊತ್ತಿಗೆ ಸಿಐ ಸಾಹೇಬರ ಸವಾರಿ ಕೆರೆಯ ಬಳಿಗೆ ಬಂತು. ಅವರ ಜತೆ ಜೀಪಿನಲ್ಲಿ ತೊರೆಓಬೇನಹಳ್ಳಿಯ ಆಯುರ್ವೇದ ಡಾಕ್ಟರು ಗೋಣಿ ಬಸಪ್ಪ, ಚೇರ್ಮನ್ನರಲ್ಲದೆ ಇಬ್ಬರು ಪೋಸಿಗಳೂ ಬಂದರು. ಸಾಹೇಬರ ಮುಖ ಕಂಡದ್ದೇ ತಡ ಇಬ್ಬರೂ ಎಚ್ಚೆಗಳು ಸೆಲ್ಯೂಟ್ ಹೊಡೆದು ಜೀಪಿನ ಬಳಿ ಹೋಗಿ ನಿಂತರು. 'ಕೆರೆಯ ಸುತ್ತ ಒಂದು ರೌಂಡು ಹಾಕಿ ನೋಡಿ ಬಂದ್ವಿ ಸರ್... ಯಾವ ಕ್ಲೂನೂ ಇಲ್ಲ. ನಮ್ಮ ಸರ್ವೀಸಿನಲ್ಲೇ ಇಂಥಾ ಕೇಸು ನೋಡಿಲ್ಲ. ಇದು ಆತ್ಮಹತ್ಯೆ ಅಲ್ಲ ಸಾರ್. ಕೊಲೆ ಮಾಡಿ ಹೆಣಗಳಿಗೆ ಕಲ್ಲು ಕಟ್ಟಿ ಕೆರೆ ಮಧ್ಯಕ್ಕೆ ಎಳಕೊಂಡು ಹೋಗಿ ಬಿಟ್ಟು ಬಂದಿರೊಹಂಗದೆ. ಇದು 307' ಅಂತ ಒಬ್ಬ ಎಚ್ಚೆ ಹೇಳಿ ಸಾಹೇಬರ ಪ್ರತಿಕ್ರಿಯೆಗೆ ಕಾದ.

'ಹೌದ್ರಿ ನಂಗೂ ಹಂಗ ಅನಿಸಲಿಕ್ಕತ್ಯದ... ಹೆಣಗಳು ಬಿದ್ದು 36 ತಾಸು ಆಗಿರಬೌದಲ್ರಿ...' ಇಬ್ಬರೂ ಎಚ್ಚೆಗಳ ವಯಸ್ಸಿಗೆ ಬೆಲೆ ಕೊಟ್ಟು ಅವರನ್ನು ರೀ ಅಂತಲೇ ಸಂಬೋಧಿಸುತ್ತ ಸರ್ಕಲ್ ಇನ್‌ಸ್ಪೆಕ್ಟರ್ ಮಾರ್ಕ್ ಹಿತ್ತಲಮನಿ ಸಾಹೇಬರು ಕೇಳಿದರು. ಅವರ ಪೂರ್ಣ ಹೆಸರು ಮಾರ್ಕಂಡೇಯ ಶಿವಬಸಪ್ಪ ಹಿತ್ತಲಮನಿ. ಕ್ರೈಸ್ತ ಧರ್ಮಕ್ಕೆ ಮತಾಂತರ ಆದ ನಂತರ ಅವರ ಹೆಸರು ಮಾರ್ಕ್ ಆಗಿತ್ತು. ಅವರು ಹಾವೇರಿ ಕಡೆಯವರು.

'ಈಜು ಬರೋರನ್ನು ಕರೀರಲ್ಲ... ಹೋಗಿ ಹೆಣಗಳನ್ನು ಎಳಕೊಂಡ್ ಬರ್ಲಿ' ಅಂತ ಸಾಹೇಬರು ಚೇರ್ಮನ್ನರ ಕಡೆಗೆ ನೋಡುತ್ತ ಹೇಳಿದರು.

'ಸಾಹೇಬರೇ ಈ ಕೆರೆಯಲ್ಲಿ ಈಜೋವಂತ ಗಟ್ಟಿ ಗುಂಡಿಗೆಯೋರು ನಮ್ಮೂರಲ್ಲಿ ಯಾರೂ ಇಲ್ಲ. ಮಸ್ತಾನ್ ಅಂತ ಒಬ್ಬ ಇದ್ದಾನೆ. ಆದರೆ, ಇದು ದೇವರಕೆರೆ. ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರಸ್ವಾಮಿ ವನವಾಸಕ್ಕೆ ಅಂತ ಇತ್ತ ಕಡೆಗೆ ಬಂದಿದ್ದಾಗ ಈ ಕೆರೆಯನ್ನ ಖುದ್ದು ಕಟ್ಟಿಸಿದ ಅಂತ ಇತಿಹಾಸ ಹೇಳುತ್ತೆ... ಇದು ದೇವರ ಕೆರೆ. ಕೆರೆಯಲ್ಲಿ ಯಾರೂ ಈಜುವಂತಿಲ್ಲ ಅಂತ ಪಂಚಾಯ್ತಿಯಲ್ಲಿ ಠರಾವು ಪಾಸ್ ಆಗಿದೆ. ನೀವೇ ಎಲ್ಲಿಂದಲಾದರೂ ದೋಣಿನೊ, ತೆಪ್ಪಾನೊ ತರಿಸಿ ಅದರಲ್ಲಿ ನಿಮ್ಮವರನ್ನೇ ಕಳಿಸಿ ಹೆಣಗಳನ್ನು ಎಳೆಸಿ ಹಾಕಿ ಪುಣ್ಯ ಕಟ್ಟಿಕೊಳ್ಳಿ ಸ್ವಾಮಿ' ಅಂತ ಅತ್ಯಂತ ವಿನಯದಿಂದ ನಾಟಕೀಯವಾಗಿ ಕೇಳಿಕೊಂಡರು.

ಚೇರ್ಮನ್ನರ ಮಾತು ಕೇಳಿ ಮಾರ್ಕ್ ಸಾಹೇಬರಿಗೆ ಸಿಟ್ಟು ಬಂತು. ಅದನ್ನು ತೋರಿಸಿಕೊಳ್ಳದೆ, 'ಈ ಹೊತ್ತಲ್ಲಿ ದೋಣಿ ಎಲ್ಲಿಂದ ತರ್ತೀರಿ... ಒಂದ್ ಕೆಲ್ಸ ಮಾಡ್ರಿ... ನಾಳಿ ಮುಂಜಾನಿ ಹೊತ್ತಿಗೆ ನೀವ ಎಲ್ಲಿಂದಲಾದ್ರೂ ಒಂದ್ ತೆಪ್ಪಾನೊ, ದೋಣೀನೊ ಸಜ್ಜು ಮಾಡ್ರಿ... ನಾ ಹೊಳ್ಳಿ ಬರ್ತೀನಿ... ಹೆಣ ಹೊರಕ್ ಎಳೆಸಿ ಹಾಕೋಣು. ಇನ್ನೂ ಎಂಟ್ಹತ್ತು ತಾಸು ತಡ ಆದ್ರ ಏನೂ ಫರಕು ಆಗೂದಿಲ್ಲ... ಮುಂಜಾನಿ ಡಾಕ್ಟರೂ ಬರ್ತಾರ' ಅಂತ ಹೇಳುತ್ತ ಜೀಪಿನ ಕಡೆಗೆ ನಡೆದರು. ಏನೋ ನೆನಪಾದರಂತೆ ಮತ್ತೆ ಹಿಂದಕ್ಕೆ ಬಂದರು. 'ಮಿಸ್ಸಿಂಗ್ ಕಂಪ್ಲೇಂಟು ಬಂದಾವೇನೊ ಸ್ಟೇಷನ್ನಿಗೆ ಫೋನ್ ಹಚ್ಚಿ ಕೇಳ್ರಿ,' ಅಂತ ಎಚ್ಚೆಗಳಿಗೆ ಸೂಚನೆ ಕೊಟ್ಟರು. 'ನೀವ್ ಇವತ್ತ ಇಲ್ಲೇ ಡ್ಯೂಟಿ ಮಾಡ್ರಿ. ನಾ ಮುಂಜಾನಿ ಬರ್ತೀನಿ' ಅಂತ ಹೇಳುತ್ತ ಡಾಕ್ಟರ ಜತೆ ಹೊರಟೇ ಹೋದರು.

ಜೀಪು ಹೋಗುತ್ತಿರುವುದನ್ನು ಚೇರ್ಮನ್ನರು ನೋಡುತ್ತ ನಿಂತರು. ಅವರ ಜತೆಯೇ ಹೋಗಿದ್ದರೆ ಚೆನ್ನಾಗಿತ್ತು ಅಂತ ಅವರಿಗೆ ಆ ಕ್ಷಣಕ್ಕೆ ಅನ್ನಿಸಿತು. 'ಈ ಸಾಹೇಬ... ತಾನು ಮಾಡಬೇಕಾದ ಕೆಲಸವನ್ನು ನಂಗೆ ಹೇಳಿದನಲ್ಲ. ತೆಪ್ಪ ಎಲ್ಲಿಂದ ತರಿಸೋದು? ಅದೆಲ್ಲಿ ಸಿಗುತ್ತೆ...' ಅಂತ ಯೋಚಿಸುತ್ತ ನಿಂತುಬಿಟ್ಟರು.

★★★